ವಿಜಯವಾಣಿ
ಕನ್ನಡಿಗರ ಧ್ವನಿ

## ಜೈನ್ ವಿವಿಗೆ ಟಿ20 ಕ್ರಿಕೆಟ್ ಪ್ರಶಸ್ತಿ



ಸಿಎ ಕಾರ್ತಿಕ್

**ಬೆಂಗಳೂರು:** ಸಾಂಘಿಕ ನಿರ್ವಹಣೆ ತೋರಿದ ಜೈನ್ ವಿವಿ ಕಾಲೇಜು ತಂಡ ಜಿಸಿ ಸುರಾನ ಸ್ಮರಣಾರ್ಥ ಅಂತರ ಕಾಲೇಜು ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆತಿಥೇಯ ಸುರಾನ ಕಾಲೇಜು ತಂಡವನ್ನು 17 ರನ್‌ಗಳಿಂದ ಮಣಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿದೆ. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜೈನ್ ವಿವಿ ತಂಡ ಅಬ್ದುಲ್ ಮಜೀದ್(49) ಮತ್ತು ಸಿಎ ಕಾರ್ತಿಕ್(41)ಬಿರುಸಿನ ಆಟದ ನೆರವಿನಿಂದ 3 ವಿಕೆಟ್‌ಗೆ 197 ರನ್ ಪೇರಿಸಿತು. ಪ್ರತಿಯಾಗಿ ಸುರಾನ ಕಾಲೇಜು ಪ್ರತಿಹೋರಾಟ ನಡೆಸಿದರೂ ಸ್ಪಿನ್ನರ್ ಅಭಿನವ್(29ಕ್ಕೆ 5) ದಾಳಿಗೆ ತತ್ತರಿಸಿ ಅಂತಿಮವಾಗಿ 7 ವಿಕೆಟ್‌ಗೆ 180 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಪರಾಜಿತ ತಂಡದ ಆರಂಭಿಕ ಜೋಡಿ ಸ್ಟಾಲಿನ್ ಹೂವರ್(52) ಮತ್ತು ಸರ್ವೇಶ್ (38) ವಿಕೆಟ್ ನಷ್ಟವಿಲ್ಲದೆ 8 ಓವರ್‌ಗಳಲ್ಲಿ 94 ರನ್ ಗಳಿಸಿ ಉತ್ತಮ ಆರಂಭ ಒದಗಿಸಿದ್ದರು. ಜೈನ್ ವಿವಿ ಕಾಲೇಜು ತಂಡದ ಬ್ಯಾಟ್ಸ್‌ಮನ್ ಸಿಎ ಕಾರ್ತಿಕ್ ಸರಣಿಶ್ರೇಷ್ಠ ಪ್ರಶಸ್ತಿ ಪಡೆದರು.